ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಹೌದು.

ಆ) ಶೃಂಗೇರಿಯಲ್ಲಿ ಸಂಸ್ಕೃತ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಬಗ್ಗೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೋರಿದೆ.

ಇ) ಈ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬಂದಿರುವುದರಿಂದ ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಅಗತ್ಯವಾಗುವ ಹಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಬೈಲಹೊಂಗಲ ತಾಲ್ಲೂಕು ವಕ್ಕುಂದ ಸರ್ಕಾರಿ ಪ್ರೌಢಶಾಲೆಗೆ ಶಿಕ್ಷಕರನ್ನು ನೇಮಿಸುವುದರ ಹಾಗೂ ಕಟ್ಟಡ ಕಟ್ಟುವುದರ ಕುರಿತು.

2846 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ವಕ್ಕುಂದದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಈ ಪ್ರೌಢಶಾಲೆಗೆ ಶಿಕ್ಷಕರನ್ನು ಇಲ್ಲಿಯವರೆಗೂ ಡೆಪ್ಯುಟೇಶನ್ ಮೇಲೆ ನೇಮಿಸಲಾಗಿದೆಯೇ?

ಇ) ಈ ಪ್ರೌಢಶಾಲೆಗೆ ಇದುವರೆಗೆ ಖಾಯಂ ಹುದ್ದೆಗಳನ್ನು ನಿಗಧಿಪಡಿಸಿ ಶಿಕ್ಷಕರನ್ನು ಹಾಗೂ ಉಳಿದ ಹುದ್ದೆಗಳನ್ನು ನೇಮಿಸಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಈ) ಈ ಪ್ರೌಢಶಾಲೆಗೆ ಸ್ವಂತ ಕಟ್ಟಡ ಇರುವುದೇ?

ಉ) ಇಲ್ಲದೇ ಇದ್ದಲ್ಲಿ ಸರ್ಕಾರವು ಈ ಶಾಲೆಗೆ ಕಟ್ಟಡ ಕಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ ಶಿಇ 118 ಯೋ ಪ್ರಾ.ಶಾ.88ರ ರೀತ್ಯಾ ದಿನಾಂಕ 10.8.89ರಂದು 1988ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು.

ಆ) ಹೌದು.

ಇ) ಈ ಶಾಲೆಗೆ ಅಗತ್ಯವಿರುವ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು ಕೂಡಲೇ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇಲ್ಲ

ಉ) ಸೂಕ್ತ ಕಟ್ಟಡ ಕಟ್ಟುವ ಬಗ್ಗೆ ಬೆಳಗಾಂ ಜಿಲ್ಲಾ ಪರಿಷತ್‌ಗೆ ತಿಳಿಸಲಾಗಿದೆ. ಜಿಲ್ಲಾ ಪರಿಷತ್‌ನವರು ಕಟ್ಟಡ ಕಟ್ಟಲು ವಕ್ಕುಂದ ಗ್ರಾಮಸ್ಥರಿಂದ ಒಂದು ಲಕ್ಷ ವಂತಿಗೆ ಕೇಳಿದ್ದಾರೆ. ಗ್ರಾಮಸ್ಥರು ಇನ್ನೂ ವಂತಿಗೆ ಹಣ ಸಂಗ್ರಹಿಸಿ ಕೊಟ್ಟಿಲ್ಲ.

ವಂತಿಗೆ ಹಣ ಗ್ರಾಮಸ್ಥರು ನೀಡಿದ ನಂತರ ಜಿಲ್ಲಾಪರಿಷತ್ತಿನವರು ಶಾಲೆಗೆ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳುವರು.

ಊ) ಆದಾಗ್ಯೂ ಜಿಲ್ಲಾಪರಿಷತ್‌ನ್ನು ಆಯವ್ಯಯ ಒದಗಿಸಿಕೊಂಡು ಈ ಕೋರಿಕೆ ಪರಿಗಣಿಸಲು ಸರ್ಕಾರದ ವತಯಿಂದ ತಿಳಿಸಲಾಗುವುದು.

ನೇಕಾರರಿಗೂ ಸಾಲವನ್ನು ಅನ್ವಯಿಸುವ ಬಗ್ಗೆ

2845 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆಯನ್ವಯ ರೈತರಿಗೆ ದೊರೆಯುವ ರಿಯಾಯಿತಿಯನ್ನು ನೇಕಾರರಿಗೂ ವಿಸ್ತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆಯೆ?

ಆ) ಈ ಸಾಲ ಮನ್ನಾ ಮಾಡುವುದರಿಂದ ಎಷ್ಟು ಜನ ನೇಕಾರರಿಗೆ ಅನುಕೂಲ ಆಗುವುದು (ಪ್ರತಿಯೊಂದು ಜಿಲ್ಲಾವಾರು ವಿವರ ಕೊಡಿರಿ)?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಕೇಂದ್ರ ಸರ್ಕಾರದ ಸಾಲ ಮನ್ನಾ ಯೋಜನೆ ರೀತಿಯಲ್ಲಿಯೇ ರಾಜ್ಯ ಸರ್ಕಾರದ ಜಾರಿಗೆ ತಂದಿರುವ ಸಾಲ ಮನ್ನಾ ಯೋಜನೆಯಲ್ಲಿ ನೇಕಾರರಿಗೂ ರಿಯಾಯಿತಿಯನ್ನು ವಿಸ್ತರಿಸಲಾಗಿದೆ.

ಆ) ಸಾಲ ಮನ್ನಾ ಯೋಜನೆಯನ್ವಯ ರಾಜ್ಯದ 1915 ನೇಕಾರರಿಗೆ ರೂ.33.34 ಲಕ್ಷ ರಿಯಾಯಿತಿ ದೊರೆಯುತ್ತದೆ. ಜಿಲ್ಲಾವಾರು ವಿವರ ಈ ರೀತಿಯಿದೆ

ಜಿಲ್ಲೆ	ನೇಕಾರರ ಸಂಖ್ಯೆ	ರಿಯಾಯಿತಿ ಮೊತ್ತ (ಲಕ್ಷಗಳಲ್ಲಿ)
1) ಬೆಂಗಳೂರು	126	2.46
2) ತುಮಕೂರು	379	2.06
3) ಮಂಡ್ಯ	774	20.22
4) ಹಾಸನ	72	0.28
5) ದಕ್ಷಿಣ ಕನ್ನಡ	25	0.20
6) ಕೊಡಗು	8	0.23
7) ಬೆಳಗಾಂ	254	3.88
8) ಬಿಜಾಪುರ	198	1.07
9) ಉತ್ತರ ಕನ್ನಡ	59	2.88
10) ಬೀದರ್	20	0.06

ಬೈಲಹೊಂಗಲ ತಾಲ್ಲೂಕು ಬೆಳವಾಡಿಯಲ್ಲಿ ಬಸ್‌ಸ್ಟಾಂಡ್ ಕಟ್ಟುವ ಬಗ್ಗೆ

2836 - ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?